**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 1005/2022**

ಡಿಡಬ್ಲ್ಯೂ 1

**ಸಾಕ್ಷಿದಾರರ ಹೆಸರು** : ಆಸೀಫ ಅಹಮ್ಮದ ಲೋಹಾರ

**ತಂದೆಯ ಹೆಸರು** : ಇಮ್ತಿಯಾಜ

**ವಯಸ್ಸು** : 31 ವರ್ಷ

**ಉದ್ಯೋಗ** : ವ್ಯಾಪಾರ

**ವಾಸ** : ತಿಳುವಳ್ಳಿ, ತಾಃ ಹಾನಗಲ್

**ದಿನಾಂಕಃ 07-10-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದ**

ನಾನು ಈ ಪ್ರರಕಣದಲ್ಲಿ ಆರೋಪಿ ಇರುತ್ತೇನೆ. ಈ ಪ್ರಕರಣವನ್ನು ನನ್ನ ವಿರುದ್ಧ ಮೃತ್ಯುಂಜಯ ನೂರಂದೇವರಮಠ ಅವರು ಹಾಕಿರುತ್ತಾರೆ. ನನಗೆ ದೂರುದಾರರ ಪರಿಚಯ ಇಲ್ಲ. ನಾನು ದೂರುದಾರರೊಂದಿಗೆ ಯಾವುದೇ ಸಮಯಕ್ಕೂ ಯಾವದೇ ವ್ಯವಹಾರ ಮಾಡಿಲ್ಲ ಮತ್ತು ಅವರಿಂದ ಯಾವುದೇ ಸಾಲವನ್ನು ಸಹಾ ಪಡೆದಿಲ್ಲ. ನಾನು ದೂರುದಾರರಿಗೆ ಯಾವುದೇ ಸಮಯಕ್ಕೂ ನಿಪಿ-1 ನ್ನು ಸಹಿ ಮಾಡಿ ಕೊಟ್ಟಿಲ್ಲ. ದೂರುದಾರರು ತಮ್ಮ ದೂರಿನ ಪ್ಯಾರಾ ನಂಬರ 2 ರಲ್ಲಿ ಹೇಳಿರುವ ವಿಷಯಗಳು ಸಂಪೂರ್ಣ ಸುಳ್ಳು ಇರುತ್ತವೆ.

2. ತಿಳುವಳ್ಳಿಯಲ್ಲಿ ನಮ್ಮದು ಹಾರ್ಡವೇರ ಶಾಪ್ ಇದ್ದು, ಅದರ ಜೊತೆಗೆ ನಾನು ಕಟ್ಟಡ ಕಟ್ಟಲು ಬೇಕಾಗಿರುವ ಸಾಮಗ್ರಿಗಳಾದ ಸಿಮೇಂಟ್, ಸ್ಟೀಲ್ ಬಾರ

ಮಾರಾಟ ಮಾಡುತ್ತೇನೆ. ನನ್ನ ಹಾರ್ಡವೇರ್ ಅಂಗಡಿಯ ಹೆಸರು ಎಚ್.ಎಸ್.ಕ್ಯೂ ಟ್ರೇಡರ್ಸ ಎಂದು ಇರುತ್ತದೆ. ಈ ಉದ್ಯೋಗವನ್ನು ನಾನು 5 ವರ್ಷಗಳಿಂದ ಮಾಡುತ್ತೇನೆ. ನನ್ನ ಈ ಅಂಗಡಿ ಹಾನಗಲ್ ರಸ್ತೆಯಲ್ಲಿರುತ್ತದೆ. ದೂರಿನ ಶಿರೋನಾಮೆಯಲ್ಲಿ ತೋರಿಸಿರುವ ವಿಳಾಸ ನನ್ನದು ಅಲ್ಲ. ಈ ಪ್ರಕರಣ ದಾಖಲಾಗುವ ಮೊದಲು ದೂರುದಾರರಿಂದ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ನಿಪಿ-5 ರಲ್ಲಿರುವ ಸಹಿ ನನ್ನದಲ್ಲ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ನಿಪಿ-1 ಚೆಕ್ಕು ನನ್ನದು ಮತ್ತು ಅದರಲ್ಲಿರುವ 5 ಲಕ್ಷ ಅಂತಾ ಇಂಗ್ಲೀಷನಲ್ಲಿ ಹಾಗೂ ಅಂಕಿಯಲ್ಲಿ ಬರೆದ ಬರವಣಿಗೆ ಮತ್ತು ಸಹಿ ಮಾತ್ರ ನನ್ನದು ಇರುತ್ತದೆ.. ನಿಪಿ-1 ರಲ್ಲಿರುವ ಎಂ.ಎಸ. ನೂರಂದೇವರಮಠ ಹಾಗೂ ದಿನಾಂಕ 11-5-2022 ರ ಬರವಣಿಗೆಯು ನನ್ನದಲ್ಲ ಮತ್ತು ಅದನ್ನು ಬರೆಯಲು ನಾನು ಯಾರಿಗೂ ಅಧಿಕಾರವನ್ನು ಸಹಾ ಕೊಟ್ಟಿರುವುದಿಲ್ಲ.

3. ಹಾವೇರಿಯಲ್ಲಿ ರಿಯಲ್ ಎಸ್ಟೇಟ್ ಮಾಡುವ ಕನವಳ್ಳಿ ಗ್ರಾಮದ ಮೌಲಾಸಾಬ ಗಣಜೂರರವರಿಗೆ ನಾನು 2021 ರಲ್ಲಿ ಈ ಪ್ರಕರಣದಲ್ಲಿರುವ ನಿಪಿ-1 ಚೆಕ್ಕನು ಕೊಟ್ಟಿದ್ದೆ. ಹಾವೇರಿಯಲ್ಲಿ ಶೇತ್ಕರಿ ಜಮೀನನ್ನು 12 ಲಕ್ಷ ರೂ.ಗೆ ಖರೀದಿ ಮಾತುಕತೆ ಮುಗಿಸಿಕೊಂಡು ಒಂದು ತಿಂಗಳಲ್ಲಿ ಸಂಚಕಾರ ಪತ್ರ ಮಾಡಿಕೊಳ್ಳಲು ಅವಕಾಶ ಕೇಳಿ ನಿಪಿ-1 ಚೆಕ್ಕನ್ನು ಸದರಿ ಮೌಲಾಸಾಬರವರಿಗೆ ನಾನು ಕೊಟ್ಟಿದ್ದೆ. ಮೌಲಸಾಬರವರು ಖರೀದಿದಾರರನ್ನು ನನಗೆ ಪರಿಚಯ ಮಾಡಿ ಮಧ್ಯಸ್ಥರಾಗಿದ್ದು, ಅವರು ರಿಯಲ್ ಎಸ್ಟೇಟ್ ಮಾಡುತ್ತಾರೆ. ಮೌಲಸಾಬ ಮತ್ತು ಈ ಪ್ರಕರಣದ ದೂರುದಾರರ ನಡುವೆ ಏನೇನು

ವ್ಯವಹಾರಗಳು ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದಲ್ಲಿ ಈ ಪ್ರಕರಣದ ದೂರುದಾರರು ಮೌಲಸಾಬ ಗಣಜೂರರವರ ವಿರುದ್ಧ ಚೆಕ್ ಬೌನ್ಸ ಕೇಸು ಹಾಕಿರುತ್ತಾರೆ, ಆ ಬಗ್ಗೆ ನಾನು ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ. ಖರೀದಿ ಸಂಚಕಾರ ವ್ಯವಹಾರವು ಮುಂದೆ ಹೋಗಲಿಲ್ಲ, ಹೀಗಾಗಿ ನಾನು ನನ್ನ ಚೆಕ್ಕನ್ನು ವಾಪಸ್ಸು ಕೊಡುವಂತೆ ಮೌಲಾಸಾಬರವರಿಗೆ ಕೇಳಿದೆ. ಅದಕ್ಕೆ ಅವರು ಇಂದು ನಾಳೆ ಅಂತಾ ನನಗೆ ವಾಪಸ್ಸು ಕೊಡಲೇ ಇಲ್ಲ. ಆಮೇಲೆ ಕೋರ್ಟಿನಿಂದ ಈ ಪ್ರಕರಣದ ಸಮನ್ಸು ನನಗೆ ಬಂದ ಮೇಲೆ ನನ್ನ ಚೆಕ್ಕು ದೂರುದಾರರ ಬಳಿ ಹೋಗಿದೆ ಅಂತಾ ಗೊತ್ತಾಯಿತು. ಆಮೇಲೆ ನಾನು ಮೌಲಾಸಾಬರವರನ್ನು ವಿಚಾರಿಸಿದಾಗ, 5 ಲಕ್ಷ ರೂ.ಗಳನ್ನು ನಾನು ಮೃತ್ಯುಂಜಯರವರಿಂದ ಸಾಲ ಪಡೆದುಕೊಂಡು ನಿಮ್ಮ ಚೆಕ್ಕನ್ನು ಭದ್ರತೆಗಾಗಿ ಕೊಟ್ಟಿದ್ದೇನೆ, ಅವರಿಂದ ವಾಪಸ್ಸು ತಂದು ಕೊಡುತ್ತೇನೆ ಅಂತಾ ಹೇಳಿದರು. ಇವತ್ತಿಗೂ ಸಹಾ ಮೌಲಾಸಾಬರವರು ಚೆಕ್ಕನ್ನು ದೂರುದಾರರಿಂದ ವಾಪಸ್ಸು ಕೊಡಿಸುತ್ತೇನೆ ಅಂತಾ ಹೇಳುತ್ತಲೇ ಬರುತ್ತಿದ್ದಾರೆ, ಆದರೆ ವಾಪಸ್ಸು ಕೊಡಿಸಲಿಲ್ಲ.

4. ದೂರುದಾರರಿಂದ ನಾನು ಯಾವುದೇ ಕೈಗಡ ಸಾಲವನ್ನು ಪಡೆದಿಲ್ಲ ಮತ್ತು ಅದರ ತಿರುವಳಿಗಾಗಿ ನಿಪಿ-1 ನ್ನು ಸಹಾ ಕೊಟ್ಟಿಲ್ಲ. ದೂರುದಾರರು ಮತ್ತು ಮೌಲಾಸಾಬರವರ ಮಧ್ಯ ಇರುವ ವ್ಯವಹಾರಕ್ಕಾಗಿ ಮೌಲಾಸಾಬರವರು ನನ್ನ ಚೆಕ್ಕನ್ನು ನನಗೆ ಗೊತ್ತಿಲ್ಲದಂತೆ ದೂರುದಾರರಿಗೆ ಕೊಟ್ಟಿದ್ದು, ಅದನ್ನು ದುರುಪಯೋಗ ಪಡಿಸಿಕೊಂಡು, ದೂರುದಾರರು ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದು, ಆದ್ದರಿಂದ

ದೂರನ್ನು ವಜಾಗೊಳಿಸಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಫರ್ಮ್‌ಗೆ ಸಂಬಂಧಪಟ್ಟಂತೆ ಹಾಗೂ ಮೌಲಾಸಾಬರವರ ವಿರುದ್ಧ ದೂರುದಾರರು ಸಲ್ಲಿಸಿದ ದೂರಿಗೆ ಸಂಬಂಧಪಟ್ಟ ಮತ್ತು ನನ್ನ ಆಧಾರ ಕಾರ್ಡಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಅವುಗಳನ್ನು ನಿಶಾನೆಗೊಳಿಳಬೇಕೆಂದು ವಿನಂತಿಕೊಳ್ಳುತ್ತೇನೆ.

**ಆರೋಪಿ ಪರ ವಕೀಲರು ಕೋರಿಕೆ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.